# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ

**ಸಿಸಿ ಸಂಖ್ಯೆ: 986/2021**

ಹೆಸರು : ದೇವಪ್ಪ ಎನ್.ಕೆ

ಗಂಡನ ಹೆಸರು : ದತ್ತಣ್ಣ

ಫ್ರಾಯ : 59 ವರ್ಷ

ಉದ್ಯೋಗ : ಎ.ಎಸ್.ಐ

ವಾಸ : ಬೆಳ್ತಂಗಡಿ ಗ್ರಾಮ, ಬೆಳ್ತಂಗಡಿ ತಾಲೂಕು

ದಿನಾಂಕ **31.10.2023** ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ

ನಾನು ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ 2020 ರಿಂದ ಇಲ್ಲಿಯವರೆಗೆ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ನಾನು ದಿಃ 9.6.2021 ರಂದು ಪಿ.ಎಸ್.ಐ ರವರು ರಜೆಯಲ್ಲಿದ್ದ ಕಾರಣ ನಾನು ಮತ್ತು ಸಿಬ್ಬಂದಿಯಾದ ಚಾಸಾ5, 6, 4 ಮತ್ತು ಚಾಸಾ7 ರವರು ಇಲಾಖಾ ಜೀಪಿನಲ್ಲಿ ಕೋವಿಡ್ 19 ಸಾಂಕ್ರಾಮಿಕ ರೋಗದ ಮುಂಜಾಗ್ರತಾ ಕ್ರಮವಾಗಿ ಠಾಣಾ ವ್ಯಾಪ್ತಾ ರೌಂಡ್ಸ್ ಕರ್ತವ್ಯದಲ್ಲಿದ್ದಾಗ ಸುಮಾರು 14.30 ಗಂಟೆಗೆ ನಾವು ವಾಹನದಲ್ಲಿದ್ದಾಗ ಬಾತ್ಮೀದಾರರಿಂದ ಖಚಿತ ಮಾಹಿತಿ ನಡ ಗ್ರಾಮದ ನಡಬೈಲು ಎಂಬದಲ್ಲಿ ಕೋಳಿಯಂಕ ಎಂಬ ಹಣವನ್ನು ಪಣವಾಗಿ ಇಟ್ಟು ಜೂಜಾಟ ಆಡುತ್ತಿರುವುದಾಗಿ ಬಾತ್ಮೀ ಬಂದಿರುವುದಾಗಿ ತಡವಾದರೆ ತಪ್ಪಿಸಿಕೊಂಡು ಹೋಗಬಹುದು ಎಂದು ಕೂಡಲೇ ಮಂಜೊಟ್ಟಿ ಎಂಬಲ್ಲಿಗೆ ಹೋಗಿ ಚಾಸಾ2 ಮತ್ತು 3 ರವರಿಗೆ ವಿಚಾರವನ್ನು ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡಿದ್ದು ಅವರು ಒಪ್ಪಿಕೊಂಡ ಮೇರೆಗೆ ಅವರೊಂದಿಗೆ ನಡಬೈಲು ಎಂಬಲ್ಲಿಗೆ ತಲುಪಿ ಕಾಲುದಾರಿಯಲ್ಲಿ ಸುಮಾರು 75 ಮೀ. ದೂರ ನಡೆದುಕೊಂಡು ಹೋಗಿ ಮರೆಯಲ್ಲಿ ನಿಂತು ನೋಡಲಾಗಿ ಸುಮಾರು 8 ರಿಂದ 10 ಜನ ಸುತ್ತುವರೆದು ಕೋಳಿಗಳನ್ನು ಹಿಡಿದುಕೊಂಡು ಹಣವನ್ನು

ಪಣವಾಗಿಟ್ಟು ಜೂಜಾಟ ಆಡಿತ್ತಿರುವುದನ್ನು ಖಚಿತಪಡಿಸಿಕೊಂಡಿದ್ದು, ಸುತ್ತುವರಿದು ಹಿಡಿಯಲು ಪರಯತ್ನಿಸಿದಾಗ ಎಲ್ಲರೂ ಓಡಿಹೋಗಿದ್ದು ಅವರ ಪೈಕಿ ಒಬ್ಬ 1 ನೇ ಆರೋಪಿಯನ್ನು ಸಿಬ್ಬಂದಿಯವರು ಹಿಡಿದು ನಮ್ಮಲ್ಲಿಗೆ ಕರೆದುಕೊಂಡು ಬಂದಿದ್ದು, ಆತನನ್ನು ವಿಚಾರಿಸಲಾಗಿ ಕೋಳಿಯಂಕ ಜೂಜಾಟ ಆಡಲು ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ಹಾಗೂ ಕೋವಿಡ್ 19 ಸಾಂಕ್ರಾಮಿಕ ರೋಗ ಇದ್ದ ಹಿನ್ನೆಲೆಯಲ್ಲಿ ಮಾಸ್ಕನ್ನು ಧರಿಸದೇ ಹಾಗೂ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳದೇ ಆಟ ಆಡುತ್ತಿರುವುದಾಗಿ ಒಪ್ಪಿಕೊಂಡಿದ್ದರು. ಪಂಚರ ಸಮಕ್ಷಮ ಆ ವ್ಯಕ್ತಿಯನ್ನು ಪರಿಶೀಲಿಸಲಾಗಿ ಕೋಳಿಯಂಕದಲ್ಲಿ ಜೂಜಾಟಗಾಗಿ ತಂದಿರುವ 2,100 ರೂ ಹಣ ಹಾಗೂ ಹರಿತವಾದ ಬಾಳು ಮತ್ತು 2 ನೂಲಿನ ಉಂಡೆಗಳನ್ನು ಸ್ವಾಧೀನಪಡಿಸಿಕೊಂಡಿದ್ದು, ಅಲ್ಲದೆ ಹತ್ತಿರದಲ್ಲೆ ಇದ್ದ ವಿವಿಧ ಜಾತಿಯ 5 ಕೋಳಿಗಳನ್ನು ಸ್ವಾಧೀನಪಡಿಸಿಕೊಂಡು ಮುಂದಿನ ಕ್ರಮಕ್ಕಾಗಿ ಠಾಣೆಗೆ ಕರೆದುಕೊಂಡು ಬಂದಿರುತ್ತೇವೆ ಮಹಜರ್ ನ್ನು 3.15 ರಿಂದ 4 ಗಂಟೆಯವರೆಗೆ ಸ್ಥಳದಲ್ಲಿ ತಯಾರಿಸಿ ಪಂಚರ ಸಹಿಯನ್ನು ಪಡೆದುಕೊಂಡು ಠಾಣೆಗೆ ವಾಪಾಸಾಗಿ ಆರೋಪಿ ಮತ್ತು ಸ್ವತ್ತುಗಳನ್ನು ಠಾಣಾ ಎಸ್.ಹೆಚ್.ಒ ರವರಿಗೆ ಮುಂದಿನ ಕ್ರಮಕ್ಕಾಗಿ ಹಾಜರುಪಡಿಸಿರುತ್ತೇವೆ ಮಹಜರ್ ನಲ್ಲಿ ನನ್ನ ಸಹಿ ಇರುತ್ತದೆ. ಮಹಜರ್ ನಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಮಹಜರ್ ನ್ನು ನಿಪಿ1 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ1(ಎ), 1(ಬಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಮಹಜರ್ ನ್ನು ಠಾಣಾ ಲಾಪ್‌ಟಾಪ್ ಮುಖೇನ ತಯಾರಿಸಿ ಚಾಸಾ4 ರವರಿಂದ ಬೆರಳಚ್ಚು ಮಾಡಿಸಿರುತ್ತೇನೆ. ದಿಃ 10.6.2021 ರಂದು ಚಾಸಾ10 ರವರು ನೀಡಿದ ಕಡತವನ್ನು ಪರಿಶೀಲಿಸಿ ದಾಳಿ ಸಮಯ ಸಹಕರಿಸಿ ಪಂಚರು ಮತ್ತು ಸಿಬ್ಬಂದಿಯವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಹೆಚ್ಚಿನ ತನಿಖೆಗಾಗಿ ಕಡತವನ್ನು ಚಾಸಾ11 ರವರಿಗೆ ಒಪ್ಪಿಸಿರುತ್ತೇನೆ. ವಶಪಡಿಸಿದ ಸ್ವತ್ತನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ವಶಪಡಿಸಿಕೊಂಡ ಕಪ್ಪು, ಹಳದಿ, ಕೆಂಪು ಬಣ್ಣದ ದಾರ ಹಾಗೂ ಕೆಂಪು, ನೀಲಿ ಬಣ್ಣದ ದಾರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ1 ಎಂದು, ಕೋಳಿ ಕಾಲಿಗೆ ಕಟ್ಟುವ 2 ಬಾಳುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಮು.ಮಾ2 ಎಂದು ಗುರುತಿಸಲಾಯಿತು. 1 ನೇ ಆರೋಪಿಯಿಂದ ಸ್ವಾಧೀನಪಡಿಸಿಕೊಂಡ 500 ಮುಖಬೆಲೆಯ 2 ನೋಟುಗಳು, 200 ಮುಖಬೆಲೆಯ 5 ನೋಟುಗಳು ಹಾಗೂ 100 ಮುಖಬೆಲೆಯ 1 ನೋಟನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಮು.ಮಾ3 ಎಂದು ಗುರುತಿಸಲಾಯಿತು. ಈ ಹಂತದಲ್ಲಿ ಕೋಳಿಗೆ ಸಂಬಂಧಿಸಿದ ಮೂಲ ಛಾಯಾಚಿತ್ರಗಳನ್ನು ಹಾಜರುಪಡಿಸದ ಕಾರಣ ಮಾನ್ಯ ಸಸ.ಅ ರವರು ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.

( ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಕಾಲಾವಕಾಶ ಕೋರಿರುವುದರಿಂದ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ